## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 440 ಗ್ರಾಪಂಅ 2015.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:22.07.2015

# ಸುತ್ತೋಲೆ

ವಿಷಯ: ಗ್ರಾಮ ಪಂಚಾಯತ್ ನಿಧಿಯಲ್ಲಿ ಶೇ.25 ಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಲು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಅ.ಸ.ಪತ್ರ ಸಂಖ್ಯೆ: ಸಕನಿ/37ಎಸ್‌ಎಲ್‌ಪಿ 2014-15, ದಿನಾಂಕ 21.11.2014
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 130 ಗ್ರಾಪಂಅ 2003, ದಿನಾಂಕ 30.04.2003

***

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 213ರಡಿ ಗ್ರಾಮ ಪಂಚಾಯತಿಗೆ ಎಲ್ಲಾ ಮೂಲಗಳಿಂದ ಲಭ್ಯವಾಗುವ ಅನುದಾನಗಳಲ್ಲಿ ಶೇಖಡ 25ಕ್ಕಿಂತ ಕಡಿಮೆ ಇಲ್ಲದಂತೆ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲು ಗ್ರಾಮ ಪಂಚಾಯತಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಗ್ರಾಮ ಪಂಚಾಯತಿ ಹಂತದಲ್ಲಿ ಅನುಷ್ಠಾನಗೊಳ್ಳುವ ಬೇರೆ ಬೇರೆ ಕಾರ್ಯಕ್ರಮಗಳ ಅನುದಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಗ್ರಾಮ ಪಂಚಾಯತಿಗಳ ಸ್ವಂತ ಆದಾಯ ಸಂಗ್ರಹಣೆಯಲ್ಲಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲು ಉಲ್ಲೇಖ-2 ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಮುಂದುವರೆದು, ಸರ್ಕಾರವು ಗ್ರಾಮ ಪಂಚಾಯತಿಗಳ ಸ್ವಂತ ಆದಾಯ ಸಂಗ್ರಹಣೆಯಲ್ಲಿ ವೆಚ್ಚ ಭರಿಸಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸುವಲ್ಲಿ ಗ್ರಾಮ ಪಂಚಾಯತಿಗಳು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಈ ಕೆಳಗಿನಂತೆ ನಿರ್ಧಿಷ್ಟಪಡಿಸಲಾಗಿದೆ.

1. **ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕನುಗುಣವಾಗಿ ವಿದ್ಯಾಭ್ಯಾಸ ಪ್ರಮಾಣ ಪತ್ರ ಪಡೆದುಕೊಂಡು ಸಹಾಯಧನ ನೀಡಬಹುದು. ಸಹಾಯಧನವು ಫೀಜುಗಳಿಗೆ, ಪುಸ್ತಕಗಳನ್ನು ಖರೀದಿಸುವುದು ಒಳಗೊಳ್ಳುತ್ತದೆ. ಎಸ್.ಎಸ್.ಎಲ್.ಸಿ.ಯವರಿಗೆ 500/-, ಪಿಯುಸಿಯವರಿಗೆ 750/-, ಪದವಿಯವರಿಗೆ 1000/- ಹಾಗೂ ಉನ್ನತ ಪದವಿ ಅಥವಾ ವೃತ್ತಿಪರ ಶಿಕ್ಷಣದವರಿಗೆ 1500/- ರಂತೆ ವಾರ್ಷಿಕವಾಗಿ ಒಮ್ಮೆ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು ಪರಿಕ್ಷೆಗಳಲ್ಲಿ 80% ಗಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸಹಾಯಧನ (ಕ್ಯಾಶ್ ಅವಾರ್ಡ) ನೀಡಬಹುದು.

ಎಸ್.ಎಸ್.ಎಲ್.ಸಿ.ಯಾದವರಿಗೆ 500/-, ಪಿಯುಸಿಯಾದವರಿಗೆ 750/-, ಪದವಿಯಾದವರಿಗೆ 1000/- ಹಾಗೂ ಉನ್ನತ ಪದವಿ ಅಥವಾ ವೃತ್ತಿಪರ ಶಿಕ್ಷಣದವರಿಗೆ 1500/- ರಂತೆ ವಾರ್ಷಿಕವಾಗಿ ಒಮ್ಮೆ ನೀಡಬಹುದು.

- ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕ್ರೀಡೆ, ಭಾಷಣ, ವಿಜ್ಞಾನ, ಸಾಂಸ್ಕೃತಿಕ ಹಾಗೂ ಇತರೆ ವ್ಯಾಸಂಗೇತರ ಸ್ಪರ್ಧೆಗಳಲ್ಲಿ ಭಾಗವಹಿಸಲು ತೆರಳುವ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ಅಥವಾ ಸಾಮಾನ್ಯ ದರ್ಜೆಯ ರೈಲು ಪ್ರಯಾಣದ ದರವನ್ನು ಸಹಾಯಧನವಾಗಿ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೊಸದಾಗಿ ಕಾನೂನು ಪದವಿ ಮುಕ್ತಾಯಗೊಳಿಸಿದ ವಕೀಲರಿಗೆ ಒಂದು ಬಾರಿಗೆ ಮಾತ್ರ ಪುಸ್ತಕಗಳು, ನೋಂದಣಿ ಶುಲ್ಕಗಳಿಗಾಗಿ ಗರಿಷ್ಟ ರೂ.5000 ವರೆಗೆ ಸಹಾಯಧನ ನೀಡಬಹುದು.
- ಕೇಂದ್ರ ಹಾಗೂ ರಾಜ್ಯ ಲೋಕಸೇವಾ ಆಯೋಗದ ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಹೆಸರಾಂತ ಹಾಗೂ ಪ್ರತಿಷ್ಠಿತ ಸಂಸ್ಥೆಗಳು ಹಮ್ಮಿಕೊಂಡ ತರಬೇತಿ ಪಡೆಯಲು ಪ್ರಯಾಣ ಭತ್ಯೆ ಗರಿಷ್ಟ ರೂ.5000 ವರೆಗೆ ಸಹಾಯಧನ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದ ದೃಷ್ಟಿದೋಷದಿಂದ ಬಳಲುವವರಿಗೆ ಅಗತ್ಯ ದಾಖಲೆಗಳನ್ನು ಪಡೆದು ಚಿಕಿತ್ಸೆ ಹಾಗೂ ಕನ್ನಡಕದ ವೆಚ್ಚ ಗರಿಷ್ಟ ರೂ.5000 ವರೆಗೆ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪಾರ್ಶ್ವವಾಯು ಹಾಗೂ ಇನ್ನಿತರ ಕಾಯಿಲೆಗಳಿಂದ ಬಳಲುತ್ತಿರುವ ಅಶಕ್ತರಿಗೆ ನಡೆದಾಡಲು ಅನುಕೂಲವಾಗುವಂತೆ ಕೃತಕ ವಯಸ್ಕರ ದ್ವಿಪಾದಿಯನ್ನು (Orthopedic Adult Walker) ಕೊಳ್ಳಲು ಸಹಾಯಧನ ಗರಿಷ್ಟ ರೂ.5000 ವರೆಗೆ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಂಗಗಳನ್ನು ಕಳೆದುಕೊಂಡ ರೋಗಿಗಳಿಗೆ ಅಗತ್ಯ ದಾಖಲೆಗಳನ್ನು ಪಡೆದು ಕೃತಕ ಅಂಗ ಜೋಡಣೆಗೆ ಸಹಾಯಧನ ಗರಿಷ್ಟ ರೂ.5000 ವರೆಗೆ ನೀಡಬಹುದು.
- ದೀರ್ಘಕಾಲ ಕಾಯಿಲೆಯಿಂದ ಬಳಲುತ್ತಿರುವವರಿಗೆ ಸರ್ಕಾರಿ ವೈದ್ಯರಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಪಡೆದು ವೈದ್ಯರಿಂದ ದೃಢೀಕರಿಸಿಕೊಂಡ ನಂತರ ಗರಿಷ್ಟ ರೂ.5000 ವರೆಗೆ ಚಿಕಿತ್ಸೆಗೆ ಸಹಾಯಧನ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಲಕಸುಬು ಹಾಗೂ ಉಪಕಸುಬು ಮಾಡುವವರಿಗೆ ಉದಾಹರಣೆಗೆ ಚಮ್ಮಾರರಿಗೆ ಚರ್ಮಕುಟೀರಗಳನ್ನು ಅಥವಾ ಚಮ್ಮಾರಿಕೆಗಾಗಿ ಅವಶ್ಯಕವಾಗಿರುವ ಸಾಮಗ್ರಿಗಳು, ಕಮ್ಮಾರಿಕೆಗೆ ಅವಶ್ಯವಾಗಿರುವ ಸಾಮಗ್ರಿಗಳು, ಬುಟ್ಟಿ ಹೆಣೆಯುವವರಿಗೆ, ಚಾಪೆ ಹೆಣೆಯುವವರಿಗೆ, ತಮಟೆ ಬಾರಿಸುವವರಿಗೆ, ಇತ್ಯಾದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂಡು ಬರುವ ಕಸುಬುದಾರರಿಗೆ ಉಪಯೋಗವಾಗುವಂತಹ ಸಾಮಗ್ರಿಗಳು ಇತ್ಯಾದಿಗಳಿಗಾಗಿ ಗರಿಷ್ಟ ರೂ.5000 ವರೆಗೆ ಸಹಾಯಧನ ನೀಡಬಹುದು.
- ಬ್ಯಾಂಕ್ ಸಾಲಗಳ ನೆರವಿನಿಂದ ಹೊಸದಾಗಿ ಸಣ್ಣ ವ್ಯಾಪಾರ ಆರಂಭಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ವ್ಯಾಪಾರದಾರರಿಗೆ ಮಾತ್ರ ಗರಿಷ್ಟ ರೂ.5,000 ವರೆಗೆ ಸಹಾಯಧನವನ್ನು, ಫಲಾನುಭವಿಗೆ ಬ್ಯಾಂಕ್ ಸಾಲ ಮಂಜೂರು ಮಾಡಿದ ನಂತರ, ಹೊಂದಾಣಿಕೆ ಮೊತ್ತದ ರೂಪದಲ್ಲಿ ಬ್ಯಾಂಕುಗಳಿಗೆ ಸಹಾಯಧನ ಪಾವತಿಸಬಹುದು.

---

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೊಸದಾಗಿ ಸ್ವಂತ ಉದ್ದಿಮೆ ಪ್ರಾರಂಭಿಸುವವರಿಗೆ ಅಂಗಡಿ ಶೆಡ್ಡುಗಳನ್ನು ಖರೀದಿಸಲು ಗರಿಷ್ಠ ರೂ.5000 ವರೆಗೆ ಸಹಾಯಧನ ನೀಡಬಹುದು. ಉದಾಹರಣೆಗೆ, ಕ್ಷೌರಿಕರಿಗೆ, ಚಿಕ್ಕ ಅಂಗಡಿ, ಬೀಡಾ ಸ್ಟಾಲ್, ಮುಂತಾದವುಗಳು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ತಯಾರಿಸಿದ ಉತ್ಪನ್ನಗಳನ್ನು ಪ್ರಚಾರ ಮಾಡಲು ಮಾರಾಟ ಮೇಳ ಹಾಗೂ ಪ್ರದರ್ಶನಗಳನ್ನು ಸ್ಥಳೀಯ ಅರ್ಹ ಸ್ವಯಂ ಸೇವಾ ಸಂಸ್ಥೆಗಳು ಏರ್ಪಡಿಸಿದಲ್ಲಿ, ಸದರಿ ಸಂಸ್ಥೆಗಳಿಗೆ ಗರಿಷ್ಠ ರೂ.5000 ವರೆಗೆ ನೀಡಬಹುದು.
- ಹೈನುಗಾರಿಗೆ ಮಾಡಲಿಚ್ಚಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಪಶು ಸಂಗೋಪನೆ ಇಲಾಖೆ ವತಿಯಿಂದ ಹಸು ಖರೀದಿಸಲು ಗರಿಷ್ಠ ರೂ.5000 ವರೆಗೆ ಸಹಾಯಧನವನ್ನು ಪಶು ಸಂಗೋಪನೆ ಇಲಾಖೆಗೆ ಹೊಂದಾಣಿಕೆ ಮೊತ್ತದ ರೂಪದಲ್ಲಿ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹೊಸದಾಗಿ ಅಡುಗೆ ಅನಿಲ ಸಂಪರ್ಕ ಪಡೆಯಲು ತಗುಲುವ ವಾಸ್ತವಿಕ ವೆಚ್ಚವನ್ನು ಸಹಾಯಧನವಾಗಿ ನೀಡಬಹುದು.
- ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕ ಫಲಾನುಭವಿ ಪ್ರಯೋಜನವಾಗಿ ಸೋಲಾರ್ ಲಾಟೀನು ದೀಪಗಳನ್ನು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಸಮುದಾಯ ಪ್ರಯೋಜನವಾಗಿ ಸೋಲಾರ್ ಬೀದಿ ದೀಪಗಳನ್ನು ಅಳವಡಿಸಲು ಶೇಖಡ 25ರ ಪರಿಮಿತಿಯ ಅನುದಾನವನ್ನು ಬಳಸಿಕೊಳ್ಳಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲನಿಗಳಲ್ಲಿ ಅರ್ಹ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಆರೋಗ್ಯ ಶಿಬಿರ, ನೈರ್ಮಲ್ಯ ಶಿಬಿರಗಳನ್ನು ಏರ್ಪಡಿಸಿದಲ್ಲಿ ಸದರಿ ಸಂಸ್ಥೆಗಳಿಗೆ ಗರಿಷ್ಠ ರೂ.5000 ವರೆಗೆ ಸಹಾಯಧನ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲನಿಗಳಲ್ಲಿ ಕಾನೂನು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕಾನೂನು ನೆರವು ಮಂಡಳಿಗೆ ಗರಿಷ್ಠ ರೂ.5000 ವರೆಗೆ ಸಹಾಯಧನ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಗುಡಿಸಲು ಹಾಗೂ ಮನೆಗಳು ಪ್ರಕೃತಿ ಹಾನಿಯಿಂದ ಹಾಳಾಗಿ ವಾಸಿಸಲು ತೀರಾ ಯೋಗ್ಯವಿರದಿದ್ದಲ್ಲಿ ಅಗತ್ಯಕ್ಕನುಗುಣವಾಗಿ ರೂ.1000 ರಿಂದ 2000 ವರೆಗೆ ಸಹಾಯಧನ ನೀಡಬಹುದು.

2. **ಅನುದಾನ ನಿಗಧಿಪಡಿಸುವಲ್ಲಿ ಅನುಸರಿಸಬೇಕಾದ ಕ್ರಮಗಳು:**

- ಗ್ರಾಮ ಪಂಚಾಯಿತಿ ಸ್ವಂತ ಆದಾಯದಲ್ಲಿ ಉಪಕರಗಳನ್ನು ಹೊರತುಪಡಿಸಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಖರ್ಚು ಭರಿಸುವುದು.
- ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಲ್ಲಿ ಸರ್ಕಾರಿ ಹಾಗೂ ಇತರೆ ಇಲಾಖೆಗಳ ಪರವಾಗಿ ಸಂಗ್ರಹಿಸಿ, ಸರ್ಕಾರಕ್ಕೆ ಮರುಪಾವತಿಸಬೇಕಾದ ತೆರಿಗೆಗಳನ್ನು ಹೊರತುಪಡಿಸಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಖರ್ಚು ಭರಿಸುವುದು.
- ಪ್ರಸಕ್ತ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿದ ಅನುದಾನವನ್ನು ಆಯಾ ಆರ್ಥಿಕ ಸಾಲಿನಲ್ಲೇ ಕಡ್ಡಾಯವಾಗಿ ಖರ್ಚು ಭರಿಸುವುದು.
- ಈ ಸುತ್ತೋಲೆಯಲ್ಲಿ ಹೊರಡಿಸಿದ ಮಾರ್ಗಸೂಚಿಗಳನ್ನು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ನಿರ್ಣಯದಂತೆ ಅನುಷ್ಠಾನಗೊಳಿಸುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ಧಾರ್ಮಿಕ ಸಭೆ, ಸಮಾರಂಭ, ಕಾರ್ಯಕ್ರಮಗಳಿಗೆ, ಧಾರ್ಮಿಕ ಕಟ್ಟಡ ನವೀಕರಣ ಹಾಗೂ ದುರಸ್ಥಿ ಹಾಗೂ ಇನ್ನಿತರ ಯಾವುದೇ ಧಾರ್ಮಿಕ ಚಟುವಟಿಕೆಗಳಿಗೆ ಈ ಅನುದಾನವನ್ನು ಬಳಸತಕ್ಕದ್ದಲ್ಲ.

ಮೇಲೆ ನೀಡಿರುವ ಮಾರ್ಗಸೂಚಿಗಳಲ್ಲದೆ, ಪ್ರದೇಶಿಕ ಭಿನ್ನತೆಯ ಕಾರಣದಿಂದ ಇನ್ನಾವುದೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮಗಳು ಮುಖ್ಯವೆನಿಸಿದಲ್ಲಿ, ಗ್ರಾಮ ಪಂಚಾಯಿತಿಗಳು ತಮ್ಮ ತಮ್ಮ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಅಗತ್ಯ ಕ್ರಮವಹಿಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆಯನ್ನು ನೀಡಲು ಕ್ರಮವಹಿಸಲು ತಿಳಿಸಿದೆ. ಮೇಲೆ ತಿಳಿಸಿರುವ ಕಾರ್ಯಕ್ರಮಗಳಲ್ಲದೆ ಇನ್ನು ಕೆಲವು ಕಾರ್ಯಕ್ರಮಗಳು ಅಗತ್ಯವೆನಿಸಿ ಸೇರಿಸಬೇಕಾಗಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದಲ್ಲಿ ಅವುಗಳನ್ನು ಸಹ ಪರಿಗಣಿಸಲು ಅಗತ್ಯ ಸುತ್ತೋಲೆಯನ್ನು ಹೊರಡಿಸಲಾಗುವುದು.

23/7/18

(ಕೆ.ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು:

1. ಎಲ್ಲಾ ಜಿಲ್ಲಾಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ. (ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕ್ತಾರಿಗಳ ಮೂಲಕ)
4. ಗಣಕ ಕೋಶ–ಇಲಾಖಾ ವೆಬ್‌ಸೈಟ್‌ಗೆ ಅಳವಡಿಸಲು.
5. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು.
6. ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ :

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.